ಎರಡನೇ ಸೆಮಿಸ್ಟರ್ ಬಿ.ಎ./ಬಿ.ಎಚ್.ಎಂ. ಪರೀಕ್ಷೆ, ಮೇ 2017
(CBCS) (Freshers and Repeaters) (2014-15 and Onwards)
ಕನ್ನಡ ಭಾಷಾ ಪತ್ರಿಕೆ – II
ಸುವರ್ಣ ಸಂಪದ ಮತ್ತು ಚೋಮನ ದುಡಿ

Time : 3 Hours  Max. Marks : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : (೧×೬=೬)

ದೇಶಪ್ರೇಮದ ಗಾಳಿ ಬೀಸುತ್ತಿಲ್ಲ
ಈಗ ಎಲೆಯಲುಗುತ್ತಿಲ್ಲ ಆಗ, –
ಬಿದ್ದಿದ್ದ ಹುಳು ಹುಪ್ಪೆ ಹೆಳವ ಕುನ್ನಿಗಳೆಲ್ಲ
ತಲೆಯೆತ್ತಿ ನಭಕೆ ಓಡಾಡಿದವು ಪೂರ್ವ
ಪಶ್ಚಿಮಕು ಒಂದೂ ಈಗ ಕಾಣುತ್ತಿಲ್ಲ.
ಈಗ ಉರಿಬೇಗೆ ಕೆಳಗೆ ನೆಲದಿಂದ,
ಮೇಲೆ ಮುಗಿಲಿಂದ ಅತ್ತಿತ್ತ
ಮಾರಣ ಬಿಸಿಲ ಸೂಜಿಗಳ ಕುಣಿತ.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : (೨×೨=೪)

೧) ಮಹಾಮನೆ
೨) ಗಂಗಿಹಳ್ಳ
೩) ಬಸವಣ್ಣ
೪) ಭಾಗೀರತಿಯ ಸಂಕಟ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (೧×೧೦=೧೦)

೧) 'ಮಾದಿಗರ ಹುಡುಗಿ' ಕವಿತೆಯಲ್ಲಿ ವ್ಯಕ್ತವಾಗುವ ಸಾಮಾಜಿಕ ಮೌಲ್ಯವನ್ನು ವಿಶ್ಲೇಷಿಸಿ.
೨) 'ಬರುವುದಾದರೆ ಮುಂಡಿಗೆಯ ಬಿಡಿಸು' ಪದ್ಯದ ಸ್ವಾರಸ್ಯವನ್ನು ವಿವರಿಸಿ.

P.T.O.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (೨×೫=೧೦)

೧) ದುಡಿಯೊಡನೆ ಚೋಮನ ನಂಟು.

೨) ಬೆಳ್ಳಿ ತನ್ನ ತಮ್ಮನನ್ನು ರಕ್ಷಿಸಿದ ಪ್ರಸಂಗ.

೩) ಚೋಮನ ಕುಟುಂಬದ ಸದಸ್ಯರ ಪರಿಚಯ.

೪) ಚೋಮನಿಗೆ ಗದ್ದೆ ಕೊಡಲು ಪಾದ್ರಿ ಹಾಕಿದ ನಿಬಂಧನೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (೧×೧೦=೧೦)

೧) ಚೋಮನ ಜೀವನದ ಗುರಿ ಯಾವುದಾಗಿತ್ತು ? ಅದನ್ನು ಈಡೇರಿಸಿಕೊಳ್ಳಲು ಅವನು ಪಟ್ಟ ಕಷ್ಟಗಳನ್ನು ವಿವರಿಸಿ.

೨) ಬೆಳ್ಳಿ ತನ್ನ ತಂದೆಯ ಸಾಲವನ್ನು ತೀರಿಸಿದ ಬಗೆ ಮತ್ತು ಸಂಸಾರ ನಿರ್ವಹಿಸಿದ ರೀತಿಯನ್ನು ವಿಶ್ಲೇಷಿಸಿ.

೩) ಸಂಕಪ್ಪಯ್ಯ, ಮನ್ವೇಲ, ಪಾದ್ರಿ ಇವುಗಳಲ್ಲಿ ಎರಡು ಪಾತ್ರಗಳನ್ನು ಪರಿಚಯಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (೧×೫=೫)

೧) ಹಳೆಬೇರು ಹೊಸ ಚಿಗುರು.

೨) ಕೋಗಿಲೆಯ ಮೊಟ್ಟೆ.

ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : (೧×೧೦=೧೦)

೧) ಬೊಗಳುವ ನಾಯಿಯ ಗುಣ–ಸ್ವಭಾವವನ್ನು ವಿವರಿಸಿ.

೨) 'ಕಾವ್ಯ ಧರ್ಮ'ವನ್ನು 'ನವನೀತ' ಪ್ರಬಂಧದ ಹಿನ್ನೆಲೆಯಲ್ಲಿ ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (೧×೫=೫)

೧) ಲೆಮಾರ್ಕನ ಜೀವ ವಿಕಾಸವಾದ.

೨) ರಂಪಣಿ ಬಲೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (೧×೧೦=೧೦)

೧) ಶಿಕ್ಷಣ ಕ್ಷೇತ್ರದ ಸಮಸ್ಯೆ ಮತ್ತು ಸವಾಲುಗಳನ್ನು ವಿವರಿಸಿ.

೨) ಚಿಕ್ಕಂದಿನಲ್ಲಿ ನಿರೂಪಕಿ ಕಂಡ ಕಡಲಿಗೂ ನಂತರ ಕಂಡ ಕಡಲಿಗೂ ಇರುವ ವ್ಯತ್ಯಾಸ ಮತ್ತು ಅದರ ಕಾರಣಗಳನ್ನು ಬರೆಯಿರಿ.

೩) ಡಾರ್ವಿನ್ನನ ವಿಕಾಸವಾದದ ಸ್ವರೂಪವನ್ನು ವಿವರಿಸಿ.

---